**ಅಸಲು ದಾವ ಸಂಖ್ಯೆ: 187/2019**

**ಪಿ.ಡಬ್ಲೂ -1**

**ದಿಃ29-10-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ SHY ರವರಿಂದಃ-**

1. ನಾನು 2ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಈ ದಾವೆಯನ್ನು ನನ್ನ ಅಜ್ಜಿಯ ಆಸ್ತಿಯಲ್ಲಿ ನನ್ನ ತಾಯಿಗೆ ಹಾಗೂ ನನ್ನ ತಾಯಿಯ ನಂತರ ನನಗೆ ಸೇರಿಬೇಕು ಎಂದು ಹೂಡಿರುತ್ತೇನೆ. ನನ್ನ ತಾಯಿಯ ಹೆಸರು ಚಂದ್ರವ್ವ. ನನ್ನ ಅಜ್ಜಿ ಎಂದರೆ ನನ್ನ ತಾಯಿಯ ತಾಯಿಯ ಹೆಸರು ಯಲ್ಲವ್ವ. ಚಂದ್ರವ್ವ ರವರು ಮರಣಹೊಂದಿರುತ್ತಾರ. ನನ್ನ ತಾಯಿ ಚಂದ್ರವ್ವ ರವರು 4-5 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಯಾವ ಇಸವಿಯಲ್ಲಿ ಅವರು ಮರಣಹೊಂದಿರುತ್ತಾರೆ ಎಂದು ನನಗೆ ನೆನಪಿಲ್ಲ. ಚಂದ್ರವ್ವ ರವರ ಮರಣ ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಿರುತ್ತೇನೆ. ಈಗ ನಾನು ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡುತ್ತಿದ್ದು, ಅದರಲ್ಲಿ ನನ್ನ ತಾಯಿ ಚಂದ್ರವ್ವ ರವರ ಮರಣ ಪ್ರಮಾಣ ಪತ್ರ ಇರುವುದಿಲ್ಲ ಎಂದರೆ ಸರಿಯಲ್ಲ. ಚಂದ್ರವ್ವ ರವರ ವಾರಸಾ ಪ್ರಮಾಣ ಪತ್ರ ನಾನು ಹಾಜರುಪಡಿಸಿರುವುದಿಲ್ಲ, ಆದರೆ ನನ್ನ ತಾಯಿಗೆ ನಾನು ಒಬ್ಬಳೇ ಮಗಳು. ನಾನು ಚಂದ್ರವ್ವ ರವರ ಮಗಳು ಎಂದು ತೋರಿಸಲು ನನ್ನ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಈ ದಾವೆ ಹೂಡುವ ಸಂದರ್ಭದಲ್ಲಿ ನನ್ನ ತಾಯಿ ಬದುಕಿದ್ದರು. ಈ ದಾವೆಯನ್ನು ನನ್ನ ತಾಯಿ ಹೂಡಿದ್ದರು ಹಾಗೂ ಅವರ ನಂತರ ಅದನ್ನು ನಾನು ಮುಂದುವರೆಸಿಕೊಂಡು ಹೋಗುತ್ತಿದ್ದೇನೆ. ಈ ದಾವೆಯಲ್ಲಿನ ದಾಖಲೆಗಳನ್ನು ನಾನೇ ನನ್ನ ವಕೀಲರಿಗೆ ನೀಡಿರುತ್ತೇನೆ. ನಾನು ಚಂದ್ರವ್ವ ರವರ ಮಗಳು ಎಂದು ತೋರಿಸಲು ಯಾವ ದಾಖಲೆ

ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿ ತನ್ನ ಆಧಾರ ಕಾರ್ಡ ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ. ನಿಪಿ-16 ಆಧಾರ ಕಾರ್ಡನಲ್ಲಿ ನಾನು ಚಂದ್ರವ್ವ ರವರ ಮಗಳು ಎಂದು ಬರೆದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-15 ರ ಶಾಲಾ ವರ್ಗಾವಣೆ ಪ್ರಮಾಣ ಪತ್ರದಲ್ಲಿ ಚಂದ್ರವ್ವ ರವರು ನನ್ನ ತಾಯಿ ಎಂದು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಚಂದ್ರವ್ವ ರವರಿಗೂ ಹಾಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಹಾಗೂ ನಾನು ಚಂದ್ರವ್ವ ರವರ ಮಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ.

2. ಈ ದಾವೆಯನ್ನು ಯಾವ ಆಸ್ತಿಗಳಿಗೆ ಸಂಬಂಧಪಟ್ಟಂತೆ ಹೂಡಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ಈ ದಾವೆ ಹೂಡಲು ಮಾಹಿತಿಯನ್ನು ನನ್ನ ತಾಯಿ ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರು ಮಾಡಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ತಿಳಿದಿರುತ್ತವೆ. ದಾವಾ ಆಸ್ತಿಗಳು ಮನ್ನೂರು ಗ್ರಾಮದಲ್ಲಿ ಇರುತ್ತವೆ. ನಾನು ಮಜಗಾಂವನಲ್ಲಿ ವಾಸವಿರುತ್ತೇನೆ. ನಾನು ಮನ್ನೂರು ಗ್ರಾಮಕ್ಕೆ ಆಗಾಗ ಹೋಗುತ್ತೇನೆ. ನಾನು ಮನ್ನೂರು ಗ್ರಾಮಕ್ಕೆ ಸುಮಾರು ಎಂಟು ದಿನಗಳಾಗಿವೆ. ನಾನು ಮನ್ನೂರು ಗ್ರಾಮಕ್ಕೆ ಆಸ್ತಿಗಳನ್ನು ನೋಡಲು ಹೋಗಿದ್ದೆ. ಸದರಿ ಆಸ್ತಿಗಳೆಂದರೆ ಜಮೀನುಗಳು ಹಾಗೂ ಮನೆ ಆಗಿರುತ್ತವೆ. ಸದರಿ ಜಮೀನುಗಳ ವ್ಯವಸಾಯವನ್ನು ಯಾರೂ ಸಹ ಮಾಡುತ್ತಿಲ್ಲ. ದಾವಾ ಜಮೀನಿನಲ್ಲಿ ಪ್ರತಿವಾದಿಯರೇ ವ್ಯವಸಾಯ ಮಾಡುತ್ತಾರೆ ಹಾಗೂ ಅವರೆ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ನನಗೆ ಅರ್ಥ ಆಗುತ್ತಿಲ್ಲ. ಪ್ರತಿವಾದಿಯರ ಪೈಕಿ 3ನೇ ಪ್ರತಿವಾದಿ ಮನ್ನೂರು ಗ್ರಾಮದಲ್ಲಿ ವಾಸವಿರುತ್ತಾರೆ ಹಾಗೂ ಉಳಿದ ಹೆಣ್ಣುಮಕ್ಕಳು ಅವರವರ ಗಂಡನ ಮನೆಯಲ್ಲಿ ವಾಸವಿರುತ್ತಾರೆ. ದಾವಾ ಆಸ್ತಿಯ ಉತಾರದಲ್ಲಿ ಪ್ರತಿವಾದಿಯರ ಹೆಸರು ಹೊರತುಪಡಿಸಿ ಬೇರೆಯವರ ಹೆಸರೂ ಸಹ ಇರುತ್ತದೆ ಎಂದರೆ ನನಗೆ

ಗೊತ್ತಿಲ್ಲ. ದಾವೆ ಹೂಡುವ ಸಮಯದಲ್ಲಿ ನಾನು ಸದರಿ ಉತಾರಗಳನ್ನು ನನ್ನ ವಕೀಲರಿಗೆ ತೋರಿಸಿರುತ್ತೇನೆ. ಸದರಿ ಬೇರೆ ವ್ಯಕ್ತಿಗಳನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**